ಮಯೂರ ವಿಶೇಷ

# ನೋಮ್ ಚಾಮ್‌ಸ್ಕಿ

## ಅಪೂರ್ವ ವೈಚಾರಿಕ ವಿದ್ಯಮಾನ



**ಮೇಟಿ ಮಲ್ಲಿಕಾರ್ಜುನ**

'ಭಾಷಾಶಾಸ್ತ್ರದ ನ್ಯೂಟನ್' ಎಂದು ಹೆಸರಾದ ಅಮೆರಿಕದ ಪ್ರೊ. ನೋಮ್ ಚಾಮ್‌ಸ್ಕಿ (1928) ಸಮಕಾಲೀನ ಚಿಂತಕರಲ್ಲಿ ಪ್ರಮುಖರಾದವರು. ಅಮೆರಿಕದ ಕಟು ಟೀಕಾಕಾರರಾದ ಹಾಗೂ ಯುದ್ಧನೀತಿಯ ಕಾಯಂ ವಿರೋಧಿಯಾದ ಚೋಮ್‌ಸ್ಕಿ ತಮ್ಮ ಮಾತು–ಕೃತಿಗಳಿಂದ ಇಡೀ ವಿಶ್ವವನ್ನು ಪ್ರಭಾವಿಸಿರುವವರು. ಡಿ. 7ರಂದು 95 ವಸಂತಗಳನ್ನು ದಾಟುತ್ತಿರುವ ಈ ವಿಶಿಷ್ಟ ಚಿಂತಕ ಕನ್ನಡ ಜಗತ್ತಿಗೂ ಪರಿಚಿತ ಹಾಗೂ ಕರ್ನಾಟಕದ ಈ ಹೊತ್ತಿನ ಬಿಕ್ಕಟ್ಟುಗಳ ವಿಶ್ಲೇಷಣೆಗಳಿಗೂ ತಮ್ಮ ಚಿಂತನೆಗಳ ಮೂಲಕ ಹೊಳಹುಗಳನ್ನು ಹೊಳೆಯಿಸುತ್ತಿರುವ ದಾರ್ಶನಿಕ ಪ್ರತಿಭೆ.